# ವಿಷಾದ ಗೀತೆ

1

ದಿಕ್ಕಿಲ್ಲದ ನಗರದಲ್ಲಿ ನಡೆದುಕೊಂಡು ಹೋಗುತ್ತಿದ್ದೆ
ಸುಸ್ತಾಗಿ. ಜನರೆಲ್ಲ ಹೊರಟುಹೋದರು ನನ್ನನ್ನು ನೋಡದೆ
ಯಾರೋ ನನಗೆ ಡಿಕ್ಕಿಹೊಡೆದು ನಾನು ನೋಡುವ ಮೊದಲೆ
ಕರಗಿಹೋದರು. ಇದ್ದಕ್ಕಿದ್ದಂತೆ ಕಾಲುಗಳಿವೆ
ಎನಿಸಲಿಲ್ಲ ನನಗೆ. ನಾಪತ್ತೆಯಾದವು ನನ್ನವೇ ಕೈಯಿಗಳು
ಅತ್ತುಬಿಡೋಣವೆಂದರೆ ದನಿಯೇ ಇಲ್ಲ. ಸುತ್ತ
ಕವಿದುಕೊಂಡಿತು ಮಬ್ಬು. ಆಮೇಲೆ ಬೀದಿಬೀದಿಗಳಲ್ಲಿ
ಲಾಗಾಯತಿನಿಂದ ನಿಂತೇ ಇದ್ದ ಪ್ರತಿಮೆಗಳೆಲ್ಲ ಮೈಕೊಡವಿಕೊಂಡು
ಒಂದೊಂದೇ ಹೆಜ್ಜೆಯಿಡುತ್ತ ಹೊರಟುಹೋದವು ದೂರ
ನಿಧಾನ ಕವಿಯತೊಡಗಿದ ಮಬ್ಬಿನಲ್ಲಿ ಏಕಾಂಗಿ ಆಕಾಶ

2

ಜನಜಂಗುಳಿಯ ಮಧ್ಯೆ ಏನೋ ಗಲಾಟೆ ದೊಂಬಿ
ಇದ್ದಕಿದ್ದಂತೆ ಠಳ್ಳೆಂದು ಒಡೆದುಹೋಯಿತು
ಭವ್ಯಭವನವೊಂದರ ಗೋಡೆಗಾಜು
ನೆರೆದವರೆಲ್ಲ ದಿಕ್ಕಾಪಾಲು

ಸಂಜೆ ಇಳಿಯುವವರೆಗೂ ಒಡೆದ ಗಾಜುಗಳೆಲ್ಲ
ತೋರಿಸುತ್ತಿದ್ದವು ಆಕಾಶವನ್ನು ಇಷ್ಟಿಷ್ಟೆ

ಮರುದಿನ ಬೆಳಿಗ್ಗೆ ಗುಡಿಸಿಹಾಕಿದರು ಕೆಲಮಂದಿ
ಪ್ರತಿಫಲಿಸುವ ಅವಕಾಶವನ್ನೂ ಕೊಡದೆ
ಗಾಜುಗಳಿಗೆ

3

ಹಾಳುಸುರಿಯುತ್ತಿರುವ ಬೀದಿಗಳಿಗೆ ಸಮಯವಿಲ್ಲ
ಜನಜಂಗುಳಿಯ ತುಂಬಿಕೊಳ್ಳುವುದಕ್ಕೆ

ಬೀದಿಯುದ್ದಕ್ಕೂ ಮನೆಗಳು ಅಪ್ಪಿಕೊಳ್ಳುತ್ತಿವೆ ಒಂದನ್ನೊಂದು
ಅವಕ್ಕೇನು ಭಯವೆ ಒಂಟಿಯಾದೇವೆಂದು?

ಉರಿಯುತ್ತಿವೆ ಇನ್ನೂ ಮುಚ್ಚದ ಅಂಗಡಿಗಳ ದೀಪಗಳು
ಸರಿರಾತ್ರಿಯಾದರೂ ನಿರಾಶೆಯ ತುಳುಕಿಸುತ್ತ
ಎಲ್ಲಿಂದ ಬಂದು ಯಾಕಿಷ್ಟು ಕಾಡುತ್ತಿದೆ
ಹೊತ್ತುಗೊತ್ತಿಲ್ಲದ ಈ ನೋವು

